
ಸೋಣಲೆವ್ವ

ಉದಯ ಕುಮಾರ್ ಹಬ್ಬು



ದ್ರೋಣಲವ್ಯ

ಮಿನಿಕಾದಂಬರಿ

ಉದಯ ಕುಮಾರ್ ಹಬ್ಬು

DRONALAVYA

ದ್ರೋಣಲವ್ಯ

A novel

Written by

Uday Kumar Habbu

ಉದಯ ಕುಮಾರ್ ಹಬ್ಬು

Abhishek House, Bittulu,

Kinnigoli – 574150, Dakshina Kannada

Mob: 9902761720

'ದ್ರೋಣಲವ್ಯ' ಕೃತಿಯ ಮುನ್ನುಡಿ

ದ್ರೋಣನ ಪಾಪ ಪ್ರಜ್ಞೆಯ ಸುತ್ತ – ಲೇಖಕರು

–ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

ದ್ರೋಣ ಮತ್ತು ಏಕಲವ್ಯರನ್ನೊಳಗೊಂಡ ಕಥನ ಕಳೆದ ನೂರು ವರ್ಷಗಳಲ್ಲಿ ಅನೇಕ ನಾಟಕಗಳಲ್ಲಿ, ಅನೇಕ ವಿಮರ್ಶೆಗಳಲ್ಲಿ ಪ್ರಕಟಗೊಂಡಿದೆ. ದ್ರೋಣ ತನ್ನ ಗುರುದಕ್ಷಿಣೆಯ ಹೆಸರಿನಲ್ಲಿ ಏಕಲವ್ಯನ ಹೆಬ್ಬೆರಳನ್ನು ಕೇಳುವುದು ಮತ್ತು ಅದನ್ನು ಏಕಲವ್ಯ ಈ ತನ್ನ ನಾಮಾಂಕಿತ ಗುರು ದ್ರೋಣನಿಗೆ ಕತ್ತರಿಸಿ ಕೊಡುವುದು ಈ ಕಥನಗಳ ಮುಖ್ಯ ಕೇಂದ್ರ ಬಿಂದುವಾಗಿದೆ. ಗೋವಿಂದ ಪೈ ಅವರ 'ಹೆಬ್ಬೆರಳು', ಕುವೆಂಪು ಅವರ 'ಬೆರಳ್‌ಗೆ ಕೊರಳ್', ಸಿದ್ಧಲಿಂಗಯ್ಯ ಅವರ 'ಏಕಲವ್ಯ' ಮುಂತಾದ ನಾಟಕಗಳು ಟಿ.ಪಿ ಕೈಲಾಸಂ, ಪರ್ವತವಾಣಿ ಮುಂತಾದ ಅನೇಕರು ಸಹ ಬರೆದ ನಾಟಕಗಳು ದೊಡ್ಡ ಸಾಲಿನಲ್ಲಿವೆ. ಹಾಗಾಗಿ ಯಾರಿಗೇ ಆದರೂ ಮೊದಲು ಸೆಳೆಯುವುದು ಮೊದಲು 'ಏಕಲವ್ಯ'ನ ಪಾತ್ರವೆ. ಇಲ್ಲಿ ತಾನು ಬೆರಳನ್ನು ಕಳೆದುಕೊಳ್ಳುವುದರಿಂದ ಹಾಗೂ ಈ ಮೂಲಕ ಶೋಷಿತನಾಗಿರುವುದರಿಂದ ಸಹಜವಾಗಿ ಯಾರ ಅನುಕಂಪವನ್ನಾದರೂ ಈತ ಮೊದಲು ಗಳಿಸುತ್ತಾನೆ. ಈ ಕ್ರಮದಲ್ಲಿ ನನ್ನ ಈವರೆಗಿನ ಓದು ಇತ್ತು. ಈ ಕ್ರಮದಲ್ಲಿ ಈ ಬಾರಿ ಕುವೆಂಪು ಅವರ 'ಬೆರಳ್‌ಗೆ ಕೊರಳ್', ನಾಟಕವನ್ನು ಓದುವಾಗ ಏಕಲವ್ಯನ ಪಾತ್ರಕ್ಕಿಂತ ದ್ರೋಣನ ಪಾತ್ರವೇ ನನ್ನನ್ನು ಹೆಚ್ಚು ಆಕರ್ಷಿಸಿತು. ಅದಕ್ಕೆ ಕಾರಣಗಳಿವೆ. ಈ ಕಾರಣಗಳ ಕಾಣ್ಕೆಯಲ್ಲಿಯೇ ಕುವೆಂಪು ಅವರು ನಾಟಕವನ್ನು ಬರೆದಿರುವುದು.

ಅದೆಂದರೆ ಏಕಲವ್ಯ ಇಲ್ಲಿ ಶೋಷಿತ. ಅನ್ಯರ ಮಾತಿಗಾಗಿ ತನ್ನ ಬೆರಳನ್ನು ಕಳೆದುಕೊಂಡಿದ್ದಾನೆ. ಆದರೆ ಈ ಅರಿವು ಅವನಿಗಿದೆಯೆ?

ಏನೇ ಆದರೂ ಇಲ್ಲಿ ದ್ರೋಣ ಶೋಷಕ ಆಗುತ್ತಾನೆ. ಏಕಲವ್ಯ ಶೋಷಿತ ಆಗುತ್ತಾನೆ. ಈ ಸ್ಪಷ್ಟ ಅರಿವು ದ್ರೋಣನಿಗಿದೆ. ತನ್ನ ಈ ಶೋಷಣೆಗೆ ಮೂಲ ತಾನು ಅರಸು ಕುಲದೊಂದಿಗೆ ಇರಿಸಿಕೊಂಡಿರುವ ಜೋಳವಾಳ (ಅನ್ನದ ಋಣ)ಯೆಂಬುದಾಗಿದೆ. ಅದರಲ್ಲೂ ತಾನು ಅರ್ಜುನನನ್ನು ಬಿಲ್ವಿದ್ಯೆಯಲ್ಲಿ ಜಗದಲ್ಲಿ ಅದ್ವಿತೀಯನನ್ನಾಗಿ ಮಾಡುವೆನೆಂಬ ಕೊಟ್ಟ ಮಾತೂ ಸಹ ಇದೆ. ಇಂತಹ ಅನ್ನದ ಋಣದೊಂದಿಗೆ ಅರ್ಜುನನ ಮತ್ಸರವೂ ಸೇರಿರುವುದರಿಂದ ತಾನು ವ್ಯವಸ್ಥೆ ಮತ್ತು ಸನ್ನಿವೇಶದ ಕೂಸಾಗಿ ಏಕಲವ್ಯನ ವಿಚಾರದಲ್ಲಿ ಶೋಷಕನಾಗಬೇಕಾಗಿದೆ.

ಹೀಗೆ ದ್ರೋಣನ ಶೋಷಕನಾದ ಹಿನ್ನೆಲೆ, ಅದರ ಸ್ವರೂಪ, ಆ ಶೋಷಣೆಗೆ ಗುರಿಯಾದ ಶೋಷಕ ಯಾರು? ಎಂಬ ಎಲ್ಲ ವಿವರಗಳ ಬಗೆಗಿನ ಅರಿವು ಅಥವಾ ಪ್ರಜ್ಞೆ ದ್ರೋಣನಿಗಿದೆ. ಈ ಪ್ರಜ್ಞೆ ತನಗಿದ್ದುದರಿಂದಲೇ ಅಮಾಯಕನಾದ ಏಕಲವ್ಯನ ಹೆಬ್ಬೆರಳನ್ನು ಪಡೆಯುವ ಕೃತ್ಯ ಪಾಪದ್ದು ಎಂದು ತನಗೆ ಅನ್ನಿಸುವುದು. ಅಂತಹ ಪಾಪ ಪ್ರಜ್ಞೆ ತನಗೆ ಮೊಳೆಯುವುದರಿಂದಲೇ ಹೆಬ್ಬೆರಳು ಕತ್ತರಿಸಿ ಬಿದ್ದಿರುವ ರಕ್ತದ ಮಡುವಿನಲ್ಲಿ ಆ ಬೆರಳಿಗೆ ಪ್ರತಿಯಾಗಿ ತನ್ನ ಕೊರಳಿನ ರುಂಡ ಅಲ್ಲಿ ಕತ್ತರಿಸಿಕೊಂಡು ಬಿದ್ದಂತೆ ಕಾಣುವುದು. ಈ ಪಾಪ ಪ್ರಜ್ಞೆ ತನಗೆ ಇಲ್ಲದೇ ಹೋಗಿದ್ದರೆ ರಕ್ತದ ಮಡುವನ್ನು ನೋಡಿದಾಗ ಅಲ್ಲಿ ಬೆರಳು ಮಾತ್ರ ಕಾಣಿಸಬೇಕಿತ್ತು. ಆದರೆ ಅದು ಮುಖ್ಯವಾಗಿ ಕಾಣದೆ, ಅಲ್ಲಿ ಸ್ಪಷ್ಟವಾಗಿ ಮುಂಡದಿಂದ ಕತ್ತರಿಸಿ ರುಂಡ ಮಾತ್ರ ಕಾಣುವುದು ಸಾಧ್ಯವಾಗಿದೆಯೆಂದರೆ ಅದಕ್ಕೆ ಪಾಪಪ್ರಜ್ಞೆ ಮಾತ್ರವೇ ಆಗಿದೆ. ಹೆದರುಪುಕ್ಲುನಿಗೆ ಹಗ್ಗವೂ ಹಾವಾಗಿ ಕಾಣುವಂತೆ ಅಪರಾಧೀ ಪ್ರಜ್ಞೆ ಇರುವವನಿಗೆ ಎಲ್ಲರಲ್ಲಿಯೂ ಗುಪ್ತದಳದವರು ಕಾಣುವಂತೆ ತಾನು ಪಾಪ ಮಾಡಿದ್ದೇನೆಂಬ ಪ್ರಜ್ಞೆಯನ್ನು ಹೊತ್ತ ದ್ರೋಣನಿಗೆ ಸಹಜವಾಗಿಯೇ ಬೆರಳ್‌ಗೆ ಪ್ರತಿಯಾಗಿ ಕೊರಳ್ ಎಂಬ ಮುಂಗಾಣ್ಕೆ ಕಾಣುತ್ತದೆ.